ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 24.10.2024

## ಜ್ಞಾಪನ

ವಿಷಯ: 2024-25ನೇ ಸಾಲಿನ ಡಿಪ್ಲೋಮ ಸೆಮಿಸ್ಟರ್ ನವೆಂಬರ್/ಡಿಸೆಂಬರ್ 2024 ರ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಪರಿಶೀಲಿಸಲು ಪರಿವೀಕ್ಷಕರನ್ನು ನೇಮಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ06/ಇಸಿಎಸ್(1)/2024 ದಿ:23.10.2024
2) ತಾಂ.ಪ.ಮಂಡಳಿಯ 153ನೇ ಕೇಂದ್ರೀಯ ಸಭೆಯ ನಿರ್ಣಯ 153.2.11
3) ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.4.2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25ನೇ ಸಾಲಿನ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು "ಆಂತರಿಕ ಅಂಕಗಳ ಪರಿವೀಕ್ಷಕರು" ಗಳನ್ನು ನೇಮಿಸಲಾಗಿದೆ. ಆಂತರಿಕ ಅಂಕಗಳ ಪರಿವೀಕ್ಷಕರುಗಳ ನೇಮಕಾತಿ ಮಾಹಿತಿ BTELinx ವೆಬ್ ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ.

ಆಂತರಿಕ ಅಂಕಗಳ ಪರಿವೀಕ್ಷಕರಿಗೆ, ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರತಿ ವಿಷಯದ Blue Books ಗಳು, ಆಂತರಿಕ ಅಂಕಗಳ ವಹಿ, BTELinx ಪೋರ್ಟಲ್‌ನಲ್ಲಿ ಪ್ರಾಂಶುಪಾಲರು ಆಂತರಿಕ ಅಂಕಗಳನ್ನು ಅಪ್‌ಲೋಡ್ ಮಾಡಿ ನಂತರ ಪೋರ್ಟಲ್ ನಿಂದ ಡೌನಲೋಡ್ ಮಾಡಿದ (ವಿದ್ಯಾರ್ಥಿಗಳು ಸಹಮತಿಸಿದ) ಮುದ್ರಿತ ಪ್ರತಿ ಮತ್ತು ಚೆಕ್ ಲಿಸ್ಟ್‌ನಲ್ಲಿ ತಿಳಿಸಿರುವ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ನಿಗದಿತ ನಮೂನೆಗಳಲ್ಲಿ ಒದಗಿಸುವುದು.

ಪರಿವೀಕ್ಷಕರುಗಳು ಉಲ್ಲೇಖ (1)ರ ಜ್ಞಾಪನದಲ್ಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಮೂಲ ಆಂತರಿಕ ಅಂಕಗಳ ವಹಿಯಲ್ಲಿನ ಅಂಕಗಳನ್ನು ಸಂಬಂಧಪಟ್ಟ BlueBooks/Records/ಇತರೆ ದಾಖಲೆಗಳೊಂದಿಗೆ ಪರಿಶೀಲಿಸಿ ದೃಢೀಕರಿಸುವುದು. ನಂತರ ವಹಿಯೊಡನೆ BTELinx ಪೋರ್ಟಲ್ ನಿಂದ ಡೌನ್ ಲೋಡ್ ಮಾಡಿದ ಮುದ್ರಿತ ಪ್ರತಿಯಲ್ಲಿನ ಅಂಕಗಳನ್ನು ಪರಿಶೀಲಿಸಿ ಜೊತೆಗೆ BTELinx ಪೋರ್ಟಲ್ Online ನಲ್ಲಿ ಆಂತರಿಕ ಅಂಕಗಳನ್ನು ಮೂಲ ಆಂತರಿಕ ವಹಿಯಲ್ಲಿನ ದೃಢೀಕೃತ ಅಂಕಗಳೊಂದಿಗೆ ಕೂಡ ಪರಿಶೀಲಿಸುವುದು ಹಾಗೂ ವ್ಯತ್ಯಾಸ ಇದ್ದಲ್ಲಿ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಗಿದೆ.

ಆಂತರಿಕ ಅಂಕಗಳ ಪರಿವೀಕ್ಷಕರು <u>ಸಂಸ್ಥೆಯ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ನವೆಂಬರ್/ಡಿಸೆಂಬರ್ 2024 ರ ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಪರಿಶೀಲಿಸಿ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರುವುದನ್ನು ಖಾತರಿಪಡಿಸಿಕೊಂಡು ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡತಕ್ಕದ್ದು</u>.

ಆಂತರಿಕ ಅಂಕಗಳ ವಹಿಯಲ್ಲಿ ಪರಿವೀಕ್ಷಕರು ಪರಿಶೀಲನೆ ವೇಳೆ ಯಾವುದಾದರೂ ಅಂಕಗಳನ್ನು ತಿದ್ದುಪಡಿ ಮಾಡಿದಲ್ಲಿ, ಅವುಗಳನ್ನು ಕಿರುಸಹಿಯೊಂದಿಗೆ ದೃಢೀಕರಿಸುವುದು ಹಾಗೂ ಬಿಟಿಇಲಿಂಕ್ಸ್ ಆನ್‌ಲೈನ್‌ನಲ್ಲಿ ಕೂಡ ಸಂಬಂಧಪಟ್ಟವರನ್ನು ಸಂಪರ್ಕಿಸಿ ತಿದ್ದುಪಡಿಗಳನ್ನು ಇಂದೀಕರಿಸುವುದು. ಪ್ರತಿ ಪುಟದಲ್ಲಿಯೂ ತಿದ್ದುಪಡಿಗಳ ಸಂಖ್ಯೆಯನ್ನು ನಮೂದಿಸಿ ದೃಢೀಕರಿಸುವುದು ಕಡ್ಡಾಯ ಎಂದು ತಿಳಿಸಲಾಗಿದೆ.

ಆಂತರಿಕ ಅಂಕಗಳ ಪರೀಕ್ಷೆ (CIE) ಗಳಲ್ಲಿ ಶೇ.40 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ಬ್ಲೂ ಬುಕ್ಸ್/ರೆಕಾರ್ಡ್ಸ್/ಚಟುವಟಿಕೆಗಳ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಿ, ಸದರಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ಸರಿಯಾಗಿ ನಮೂದಿಸಿರುವುದನ್ನು ಖಾತರಿಪಡಿಸಿಕೊಳ್ಳಲು ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ ಸೂಚಿಸಲಾಗಿದೆ. ಮುಂದುವರೆದು ಸೆಮಿಸ್ಟರ್‌ವಾರು ಆಂತರಿಕ ಅಂಕಗಳ ವಹಿಯ ಕೊನೆಯ ಪುಟದಲ್ಲಿ ಶೇ.40 ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಪಟ್ಟಿಮಾಡಿ, ಅಂತಹ ವಿದ್ಯಾರ್ಥಿಗಳು ಯಾವ ವಿಷಯದಲ್ಲಿ ನವೆಂಬರ್/ಡಿಸೆಂಬರ್ 2024 ರ ಅಂತಿಮ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ ಎಂದು ನಮೂದಿಸಿ ಪ್ರಿನ್ಸಿಪಾಲರು ಮತ್ತು ಆಂತರಿಕ ಅಂಕಗಳ ಪರಿವೀಕ್ಷಕರುಗಳು ಕೆಳಕಂಡಂತೆ ದೃಢೀಕರಿಸಲು ಸೂಚಿಸಲಾಗಿದೆ. ಈ ವಿಷಯದಲ್ಲಿ ಸಂಸ್ಥೆಯ ಪ್ರಾಂಶುಪಾಲರು ವೈಯಕ್ತಿಕ ಗಮನ ಹರಿಸುವುದು.

**ದೃಢೀಕರಣ:** ಆಂತರಿಕ ಅಂಕಗಳನ್ನು ಬ್ಲೂ ಬುಕ್ಸ್/ರೆಕಾರ್ಡ್ಸ್ ಮತ್ತು ಕ್ರೋಢೀಕೃತ ಹಾಜರಾತಿ ವಹಿಯೊಂದಿಗೆ ತಾಳೆಮಾಡಿ ಪರಿಶೀಲಿಸಲಾಗಿದೆ. ಆಂತರಿಕ ಪರೀಕ್ಷೆಗಳಲ್ಲಿ ಶೇ.40ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ಬ್ಲೂ ಬುಕ್ಸ್/ರೆಕಾರ್ಡ್ಸ್‌ಗಳನ್ನು ಕಡ್ಡಾಯವಾಗಿ ಪರಿಶೀಲಿಸಲಾಗಿದೆ ಹಾಗೂ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ಸರಿಯಾಗಿ ನಮೂದಿಸಲಾಗಿದೆ. ಸೆಮಿಸ್ಟರ್‌ವಾರು ಆಂತರಿಕ ಅಂಕಗಳ ವಹಿಯ ಕೊನೆಯ ಪುಟದಲ್ಲಿ ವಿಷಯವಾರು ಶೇ.40ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ವಿವರಗಳುಳ್ಳ ಪಟ್ಟಿಯನ್ನು ನಮೂದಿಸಲಾಗಿದೆ. ಆಂತರಿಕ ಅಂಕಗಳ ವಹಿಯ ಪ್ರತಿ ಪುಟದಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು, ವಿಭಾಗಾಧಿಕಾರಿಗಳು ಮತ್ತು ಪ್ರಿನ್ಸಿಪಾಲರು ಸಹಿ ಮಾಡಿ ದೃಢೀಕರಿಸಿರುತ್ತಾರೆ. (  ) ಸಂಖ್ಯೆ ಆಂತರಿಕ ಅಂಕಗಳ ತಿದ್ದುಪಡಿಗಳನ್ನು ಕಿರುಸಹಿಯಿಂದ ದೃಢೀಕರಿಸಲಾಗಿದೆ.

ಪ್ರಿನ್ಸಿಪಾಲರ ಸಹಿ

ಪರಿವೀಕ್ಷಕರ ಸಹಿ
ಮತ್ತು ಪೂರ್ಣ ವಿಳಾಸ (ಸೀಲು)

ಮುಂದುವರೆದು ಉಲ್ಲೇಖ(2) ರ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ಣಯದಂತೆ, ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆ ನಡೆಸಿದ Blue Book ಗಳನ್ನು ಮೂರು ವರ್ಷ ಕಾಲಾವಧಿಯವರೆಗೆ ಸಂಗ್ರಹಿಸಿಟ್ಟು ನಂತರ ನಿಯಮಾನುಸಾರ ವಿಲೇ ಮಾಡತಕ್ಕದ್ದು ಮತ್ತು ಆಂತರಿಕ ಅಂಕಗಳ ವಹಿಯನ್ನು (I.A Marks Register) ಖಾಯಂ ದಾಖಲೆಯಾಗಿ ಸಂಗ್ರಹಿಸಿಡತಕ್ಕದ್ದೆಂದು ತಿಳಿಸಲಾಗಿದೆ. ಆಂತರಿಕ ಅಂಕಗಳ ಪರಿವೀಕ್ಷಕರು ಚೆಕ್‌ಲಿಸ್ಟ್ ನಮೂನೆಯನ್ನು ಭರ್ತಿ ಮಾಡಿ ಪ್ರಾಂಶುಪಾಲರು ಮತ್ತು ಪರಿವೀಕ್ಷಕರ ಸಹಿ ನಂತರ ಒಂದು ಪ್ರತಿಯನ್ನು ಸಂಸ್ಥೆಯಲ್ಲಿ ಸಂಗ್ರಹಿಸಿಡುವುದು ಆಂತರಿಕ ಅಂಕಗಳ ಪರಿವೀಕ್ಷಕರು ಚೆಕ್ ಲಿಸ್ಟ್‌ನ ಒಂದು ದೃಢೀಕೃತ ಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು.

ಆಂತರಿಕ ಅಂಕಗಳ ವಿಷಯದಲ್ಲಿ ಯಾವುದೇ ಗೊಂದಲ/ಲೋಪದೋಷಗಳು ಉಂಟಾಗದಂತೆ ಕ್ರಮವಹಿಸಲು ಎಲ್ಲಾ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಇದರಿಂದಾಗುವ ಯಾವುದೇ ಲೋಪ/ ವಿದ್ಯಾರ್ಥಿಗಳಿಗೆ ಉಂಟಾಗುವ ಅನಾನುಕೂಲಗಳಿಗೆ/ ಕಾನೂನಾತ್ಮಕ ಸಮಸ್ಯೆಗಳಿಗೆ ಸಂಬಂಧಪಟ್ಟ ಪ್ರಿನ್ಸಿಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿಸಿ ಉಲ್ಲೇಖ (3) ರ ಸರ್ಕಾರಿ ಆದೇಶದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಕಾರ್ಯದರ್ಶಿ

ಇವರಿಗೆ,

1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ
2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ:

1. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಾರ್ಯದರ್ಶಿಯವರ ಆಪ್ತಶಾಖೆ
4. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ
5. ಇಎಫ್ ವಿಭಾಗ

**ಚೆಕ್‌ಲಿಸ್ಟ್ ನಮೂನೆ**

**ತಾಂತ್ರಿಕ ಪರೀಕ್ಷಾ ಮಂಡಳಯಿಂದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ನವೆಂಬರ್/ಡಿಸೆಂಬರ್ 2024 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು (IA Marks) ಪರಿಶೀಲಿಸಲು ನಿಯೋಜಿಸಲ್ಪಟ್ಟ ಅಧಿಕಾರಿಗಳು ಗಮನಿಸಬೇಕಾದ ಅಂಶಗಳು(ಚೆಕ್‌ಲಿಸ್ಟ್) (ಭರ್ತಿ ಮಾಡಿದ ನಂತರ ಕಾರ್ಯದರ್ಶಿಯವರಿಗೆ ರವಾನಿಸುವುದು).**

| ಕ್ರ.ಸಂ | ಅವಲೋಕನ/ವಿವರ | ಹೌದು | ಇಲ್ಲ |
|---|---|---|---|
| 01 | C-20 ಪಠ್ಯಕ್ರಮಗಳಲ್ಲಿ ನಿಗದಿಪಡಿಸಿದ ವಾರಗಳ ಅಂತ್ಯದಲ್ಲಿ ಕಿರುಪರೀಕ್ಷೆಗಳನ್ನು ನಡೆಸಲಾಗಿದೆಯೇ? | ☐ | ☐ |
| 02 | C-20 ಪಠ್ಯಕ್ರಮಗಳಲ್ಲಿ ಆಂತರಿಕ ಅಂಕಗಳನ್ನು ನೀಡಲು ವಿದ್ಯಾರ್ಥಿ ಚಟುವಟಿಕೆ (Student activity - MCQ/Quiz/ Open Book Test/ Assignments) ಗಳನ್ನು ನಿಗದಿಪಡಿಸಿದ ವಾರಗಳ ಅಂತ್ಯದಲ್ಲಿ ನಡೆಸಲಾಗಿದೆಯೇ? | ☐ | ☐ |
| 03 | C-20 ಪಠ್ಯಕ್ರಮಗಳಲ್ಲಿನ ಪ್ರಾಯೋಗಿಕ ವಿಷಯಗಳಲ್ಲಿ ಆಂತರಿಕ ಅಂಕಗಳನ್ನು ನೀಡಲು ನಿಗದಿಪಡಿಸಿದ ವಾರಗಳ ಅಂತ್ಯದಲ್ಲಿ ಕೌಶಲ್ಯ ಕಿರುಪರೀಕ್ಷೆಗಳನ್ನು (Skill Tests) ನಡೆಸಲಾಗಿದೆಯೇ? | ☐ | ☐ |
| 04 | C-20 ಪಠ್ಯಕ್ರಮಗಳಲ್ಲಿನ ಥಿಯರಿ/ ಪ್ರಾಯೋಗಿಕ ವಿಷಯಗಳಲ್ಲಿ ಆಂತರಿಕ ಅಂಕಗಳನ್ನು (CIE) ನಿಗದಿಪಡಿಸುವಾಗ ಸರ್ಕಾರಿ ಆದೇಶ/ ಚಾಲ್ತಿಯಲ್ಲಿರುವ ಸುತ್ತೋಲೆಗಳನುಸಾರ ಮೌಲ್ಯಮಾಪನವನ್ನು Rubrics for Skill Test/Practical Test/ Course Assessment & Evaluation Chart/ appropriate Rubrics by respective Course Co-ordinatorsಗಳನುಸಾರ ಮೌಲ್ಯಮಾಪನ ಮಾಡಲಾಗಿದೆಯೇ? | ☐ | ☐ |
| 05 | C-20 ಪಠ್ಯಕ್ರಮಗಳಲ್ಲಿ ನಿಗಧಿಪಡಿಸಿದಂತೆ ಪ್ರತಿ ಕಿರುಪರೀಕ್ಷೆ ನಡೆಸುವಾಗ ಕ್ರಮವಾಗಿ ಅದರಲ್ಲಿ ನಿಗಧಿಪಡಿಸಿರುವಂತೆ ಪಾಠ ಪ್ರವಚನಗಳನ್ನು ಮುಗಿಸಿರುವರೆ? ಮತ್ತು C-20 ಪಠ್ಯಕ್ರಮದ ಪಠ್ಯವಿಷಯಗಳಲ್ಲಿ ಪ್ರತಿ ಕಿರುಪರೀಕ್ಷೆ/ ಚಟುವಟಿಕೆಗಳು/ಕೌಶಲ್ಯ ಕಿರು ಪರೀಕ್ಷೆಗಳನ್ನು ನಡೆಸಿದ ತರುವಾಯ ನಿಗದಿಪಡಿಸಲಾದ CO's attainments ಸಾಧಿಸಲಾಗಿದೆಯೇ | ☐ | ☐ |
| 06 | ಪ್ರತಿ ವಿದ್ಯಾರ್ಥಿಯ ಹಾಜರಾತಿಯನ್ನು ಹಾಜರಾತಿ ಪುಸ್ತಕದಲ್ಲಿ ಭರ್ತಿ ಮಾಡಿರುವರೆ? | ☐ | ☐ |
| 07 | ಪ್ರತಿ ವಿಷಯಗಳಲ್ಲಿ ಕ್ರೋಢೀಕೃತ ಹಾಜರಾತಿಯನ್ನು ಪ್ರತಿ ತಿಂಗಳ ಅಂತ್ಯದಲ್ಲಿ ಪ್ರಕಟಿಸಲಾಗಿದೆಯೇ? ಮತ್ತು ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ & ಪೋಷಕರಿಗೆ ಮಾಹಿತಿ ನೀಡಲಾಗಿದೆಯೇ? | ☐ | ☐ |
| 08 | ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ ಹಾಗೂ ಕ್ರೋಢೀಕೃತ ಹಾಜರಾತಿ ಪುಸ್ತಕ ಪ್ರತಿ ವಿಭಾಗದಲ್ಲಿ ಇರುವುದೇ? | ☐ | ☐ |
| 09 | C-20 ಪಠ್ಯಕ್ರಮಗಳಲ್ಲಿನ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ಕ್ರೋಢೀಕೃತ ವಹಿಗಳಲ್ಲಿ(Consolidated IA Register) ಭರ್ತಿ ಮಾಡಿ ಎಲ್ಲಾ ಪುಟಗಳಲ್ಲಿ ಸಂಬಂಧಪಟ್ಟ ಉಪನ್ಯಾಸಕರು,ವಿಭಾಗಾಧಿಕಾರಿಗಳು ಮತ್ತು ಪ್ರಾಂಶುಪಾಲರು ಸಹಿ ಮಾಡಿರುವರೇ? | ☐ | ☐ |
| 10 | 2020-21, 2021-22 2022-23, 2023-24 & 2024-25ನೇ ಶೈಕ್ಷಣಿಕ ಸಾಲುಗಳಲ್ಲಿ C-20 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ, ಯಾವುದೇ ವಿಷಯ/ಗಳಲ್ಲಿ ಶೇ.40ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? ಹಾಗೂ ಅಂತಹ ವಿದ್ಯಾರ್ಥಿಗಳು ಆ ವಿಷಯ/ಗಳಲ್ಲಿ ನವೆಂಬರ್/ಡಿಸೆಂಬರ್ 2024 ರ ಅಂತಿಮ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ ಎಂದು ಘೋಷಿಸಲಾಗಿದೆಯೇ?<br>ಸೂಚನೆ: Those Candidates who have not obtained requisite minimum pass marks in CIE are not eligible to take up SEE in that course until they get requisite minimum pass marks in the CIE. They may re-register for the CIE in the Make-up examinations. | ☐ | ☐ |
| 11 | C-20 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಥಿಯರಿ ವಿಷಯಗಳು/ ಜೆ.ಓ.ಸಿ ಅಭ್ಯರ್ಥಿಗಳು ಮತ್ತು ಲ್ಯಾಟರಲ್ ಎಂಟ್ರಿ ಮೂಲಕ 3ನೇ ಸೆಮಿಸ್ಟರ್ ಪ್ರವೇಶ ಪಡೆದಿರುವ ಐ.ಟಿ.ಐ ವಿದ್ಯಾರ್ಥಿಗಳು ನಿಯಮಾನುಸಾರ ತೆಗೆದುಕೊಳ್ಳಬೇಕಾದ Bridge Subjects/ X Bridge Subjects ಸಹಿತ ಅನ್ವಯವಾಗುವಂತೆ ಆಂತರಿಕ ಅಂಕಗಳನ್ನು (CIE) ನಿಗದಿಪಡಿಸುವಾಗ ಸರ್ಕಾರಿ ಆದೇಶ/ಚಾಲ್ತಿಯಲ್ಲಿರುವ ಸುತ್ತೋಲೆಗಳನುಸಾರ ಮೌಲ್ಯಮಾಪನವನ್ನು Rubrics for Skill Test/Practical Test/ Course Assessment & Evaluation Chart/ appropriate Rubrics by respective Course Co-ordinatorsಗಳನುಸಾರ ಮೌಲ್ಯಮಾಪನ ಮಾಡಲಾಗಿದೆಯೇ? (Refer C-20 Regulations- Annexure I & II) | ☐ | ☐ |
| 12 | C-20 ಪಠ್ಯಕ್ರಮದ ಆಂತರಿಕ ಪರೀಕ್ಷೆಯ (CIE) ಪ್ರಶ್ನೆಪತ್ರಿಕೆಗಳನ್ನು ನಿಗದಿಪಡಿಸ್ಪಲಾದ "Cognitive level"/CO/PO ಗಳ ಆಧಾರದಲ್ಲಿ ತಯಾರಿಸಲಾಗಿದೆಯೇ? | ☐ | ☐ |

| | | | |
|---|---|---|---|
| 13 | C-20 ಪಠ್ಯಕ್ರಮದ ಪ್ರತಿ ವಿಷಯಗಳಿಗೆ (ಥಿಯರಿ ಮತ್ತು ಪ್ರಾಯೋಗಿಕ) "Course Plan" ಬರೆಯಲಾಗಿದೆಯೇ? ಹಾಗೂ ಸಂಬಂಧಪಟ್ಟ ವಿಭಾಗಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿದೆಯೇ? | | |
| 14 | C-20 ಪಠ್ಯಕ್ರಮದ ವಿಷಯಗಳಿಗೆ ಆಂತರಿಕ ಅಂಕಗಳಿಗಾಗಿ (ಥಿಯರಿ ಮತ್ತು ಪ್ರಾಯೋಗಿಕ) ವಿದ್ಯಾರ್ಥಿ ಚಟುವಟಿಕೆಗಳನ್ನು (Student activity) ನಡೆಸುವಾಗ Performance indicator (Rubrics) ಗಳನುಸಾರ ಮೌಲ್ಯಮಾಪನಮಾಡಲಾಗಿದೆಯೇ? ಅದಕ್ಕೆ evidence ಒದಗಿಸಲಾಗಿದೆಯೇ? | | |
| 15 | ಚಾಲ್ತಿಯಲ್ಲಿರುವ ನಿಯಮಾನುಸಾರ (ಸರ್ಕಾರಿ ಆದೇಶಗಳಂತೆ) ವಿದ್ಯಾರ್ಥಿಗಳ ಪ್ರಾಯೋಗಿಕ ವಿಷಯಗಳ ರೆಕಾರ್ಡ್‌ಗಳ/ಇತರೆ ಶೈಕ್ಷಣಿಕ ದಾಖಲೆಗಳ ಮೌಲ್ಯಮಾಪನವಾಗಿದೆಯೇ? | | |
| 16 | Midterm Feedback & Course end Survey Feedback ಗಳನ್ನು ಪ್ರತಿ ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳಲ್ಲಿ C-20 ಪಠ್ಯಕ್ರಮದ ವಿದ್ಯಾರ್ಥಿಗಳಿಂದ ಪಡೆಯಲಾಗಿದೆಯೇ? ಮತ್ತು ಪಡೆದ Feedback ಗಳ ವಿಶ್ಲೇಷಣೆ (Analysis) ಮಾಡಲಾಗಿದೆಯೇ? | | |
| 17 | ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ(ಕ್ರೋಢೀಕೃತ ವಹಿ ಸಹಿತ) ಮತ್ತು ಅಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ವಿದ್ಯಾರ್ಥಿಗಳ ಸಹಿ ಪಡೆಯಲಾಗಿದೆಯೇ? | | |
| 18 | ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/01/ಇಎಫ್/2024 ದಿನಾಂಕ:20.06.2024 ರನ್ವಯ ದಂಡರಹಿತ ಹಾಗೂ ದಂಡಸಹಿತ ನಾಲ್ಕು ಹಂತಗಳಲ್ಲಿ ಪರೀಕ್ಷಾ ಶುಲ್ಕ ಪಾವತಿಸದ ವಿದ್ಯಾರ್ಥಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? ಹಾಗೂ ಪಾಲಕರಿಗೆ ಮಾಹಿತಿ ನೀಡಲಾಗಿದೆಯೇ? | | |
| 19 | ಪರೀಕ್ಷಾ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳ ಹೆಸರುಗಳನ್ನು ಆಯಾ ಕ್ಯಾಂಡಿಡೇಟ್ ಲಿಸ್ಟ್‌ನಿಂದ ತೆಗೆದು ಹಾಕಲಾಗಿದೆಯೇ? ಮತ್ತು ಸರ್ಕಾರಿ ಖಜಾನೆಗೆ ಪಾವತಿಸಲಾಗಿರುವ ಒಟ್ಟು ಪರೀಕ್ಷಾ ಶುಲ್ಕದ ಮೊತ್ತವು ಸಂಸ್ಥೆಯಲ್ಲಿನ ಕ್ಯಾಂಡಿಡೇಟ್ ಲಿಸ್ಟ್‌ನ ಲೆಡ್ಜರ್‌ನಲ್ಲಿ ನಮೂದಿಸಿರುವಂತೆ ವಿದ್ಯಾರ್ಥಿಗಳು ನಿಯಮಾನುಸಾರ ಪಾವತಿಸಬೇಕಾದ ಮೊತ್ತಕ್ಕೆ ತಾಳೆಯಾಗುತ್ತದೆಯೇ? | | |
| 20 | ಪರಿವೀಕ್ಷಕರು C-20 ಪಠ್ಯಕ್ರಮದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ತಿಳಿಸಿರುವಂತೆ ದೃಢೀಕರಿಸಿ ಪೂರ್ಣ ವಿಳಾಸ ನಮೂದಿಸಿರುವರೇ? | | |
| 21 | ಆಂತರಿಕ ಅಂಕಗಳ ಪರಿವೀಕ್ಷಕರು ಆಂತರಿಕ ಅಂಕಗಳ ರಿಜಿಸ್ಟರ್‌ನಲ್ಲಿನ ನವೆಂಬರ್/ಡಿಸೆಂಬರ್ 2024 ರ ಪರೀಕ್ಷೆಗೆ ಸಂಬಂಧಿಸಿದಂತೆ ಸೆಮಿಸ್ಟರ್‌ವಾರು ಪ್ರತಿ ಪುಟದಲ್ಲಿಯೂ ತಿದ್ದುಪಡಿಗಳ ಸಂಖ್ಯೆಯನ್ನು ನಮೂದಿಸಿ ದೃಢೀಕರಿಸಿರುವರೇ ಹಾಗೂ ತಿದ್ದುಪಡಿಗಳನ್ನು ಕಿರು ಸಹಿಯಿಂದ ದೃಢೀಕರಿಸಿರುವರೇ? | | |
| 22 | C-20 ಪಠ್ಯಕ್ರಮದ ನಿಯಮಗಳನುಸಾರ<br>I. ಪ್ರಥಮ ಸೆಮಿಸ್ಟರ್ ಆರಂಭದಲ್ಲಿ ಪ್ರತಿ ಪ್ರೋಗ್ರಾಮ್ ನ ವಿದ್ಯಾರ್ಥಿಗಳಿಗೆ ಎರಡು ವಾರಗಳ ಅವಧಿಯ Physical activity, Creative Arts, Universal Human Values, Literacy & Profeciency, Lectures by Eminent People, Visit to local area, Familiarization of Deparment/Rules Modules ವಿಷಯಗಳನ್ನೊಳಗೊಂಡ Induction Program ಗಳನ್ನು ನಡೆಸಿರುವಿರೇ? ದಾಖಲಿಸಿ.<br>II. C-20 ಪಠ್ಯಕ್ರಮಗಳಲ್ಲಿ ನಿಗದಿಪಡಿಸಿರುವಂತೆ ಸಂಸ್ಥೆಯಲ್ಲಿನ ಎಲ್ಲಾ ವಿದ್ಯಾರ್ಥಿಗಳು ವ್ಯಕ್ತಿತ್ವ/ನೈತಿಕ ವಿಕಸನ ದ ಕಾರ್ಯಕ್ರಮಗಳಾದ NCC/ NSS/ YRC/ Yoga/ Technical Club ಇವುಗಳಲ್ಲಿ ಯಾವುದಾದರೂ ಒಂದು ಕಾರ್ಯಕ್ರಮದ ತರಬೇತಿ ಹೊಂದಿರುವರೇ?<br>III. C-20 ಪಠ್ಯಕ್ರಮಗಳಲ್ಲಿ ನಿಗದಿಪಡಿಸಿರುವಂತೆ ಪ್ರತಿ ವಿದ್ಯಾರ್ಥಿಯು ಆಯಾ ಪ್ರೋಗ್ರಾಂಗಳಲ್ಲಿನ 6ನೇ ಸೆಮಿಸ್ಟರ್ ಪಠ್ಯಕ್ರಮಗಳಲ್ಲಿ ನಿಗದಿಪಡಿಸಿರುವ Scheme of Study ಪ್ರಕಾರ ಪಾಠ ಪ್ರವಚನಗಳನ್ನು ನಡೆಸಿ ವಿದ್ಯಾರ್ಥಿಗಳ CIE ಪ್ರಕ್ರಿಯೆಗಳನ್ನು ಪೂರೈಸಿರುವರೇ? | | |
| 23 | I. NE(<40% CIE) ವಿದ್ಯಾರ್ಥಿಗಳ ಪಟ್ಟಿಯನ್ನು ಸೆಮಿಸ್ಟರ್‌ವಾರು ಮೂಲ ಆಂತರಿಕ ವಹಿಯಲ್ಲಿ ನಮೂದಿಸಲಾಗಿದೆಯೇ ಹಾಗೂ BTELinx ವೆಬ್‌ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿ ವಿಭಾಗದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? & ಸದರಿ ಪಟ್ಟಿಗಳಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಗಳ ಸಹಿ ಪಡೆಯಲಾಗಿದೆಯೇ?<br>II. ಆಂತರಿಕ ಅಂಕಗಳ ಪರೀಕ್ಷೆ (CIE) ಗಳಲ್ಲಿ ಶೇ.40 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ಬ್ಲೂ ಬುಕ್ಸ್/ರೆಕಾರ್ಡ್ಸ್/ಚಟುವಟಿಕೆಗಳ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಿರುವಿರಾ?<br>III. ಸದರಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ಸರಿಯಾಗಿ ನಮೂದಿಸಿರುವುದನ್ನು ಖಾತರಿ ಪಡಿಸಿಕೊಂಡಿರುವಿರಾ? | | |

| | | | |
|---|---|---|---|
| 24 | ಎಲ್ಲಾ ಕೋರ್ಸುಗಳ ಆಂತರಿಕ ಅಂಕಗಳನ್ನು Subject Dictionary & Candidate List ಗಳಿಗೆ ಅನುಗುಣವಾಗಿ BTELinx ವೆಬ್‌ಪೋರ್ಟಲ್ ಮೂಲಕ ಆನ್ ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? | ☐ | ☐ |
| 25 | ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ BTELinx ವೆಬ್ ಪೋರ್ಟಲ್‌ನಿಂದ ಒಂದು ಪ್ರಿಂಟ್ ತೆಗೆದು ಸಂಸ್ಥೆಯಲ್ಲಿ ಆಂತರಿಕ ಅಂಕಗಳ ವಹಿಯೊಡನೆ ತಾಳೆ ಮಾಡಿ ನಂತರ ವಿಭಾಗಾಧಿಕಾರಿಗಳು ಮತ್ತು ಪ್ರಾಚಾರ್ಯರು ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ ಹಾಗೂ ವಿದ್ಯಾರ್ಥಿಗಳು ಸಹಮತಿಸಿರುವರೇ? | ☐ | ☐ |
| 26 | ಎಲ್ಲಾ ವಿಭಾಗಗಳ ರೆಗ್ಯುಲರ್ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು BTELinx ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ನಂತರವೇ ಪ್ರಾಂಶುಪಾಲರು ಪ್ರವೇಶ ಪತ್ರಗಳನ್ನು ಮುದ್ರಿಸಲು ಕ್ರಮ ವಹಿಸಿರುವರೇ? | ☐ | ☐ |
| 27 | ಪರಿವೀಕ್ಷಕರು: ಈ ಕಛೇರಿ ಜ್ಞಾಪನ ಬಿಟಿಇ06/ಇಸಿಎಸ್(1)2024 ದಿನಾಂಕ:23.10.2024ರಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣಿಸಿ ಆಂತರಿಕ ಅಂಕಗಳ ವಹಿಯಲ್ಲಿ ಅಂಕಗಳನ್ನು ಮತ್ತು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ದೃಢೀಕರಿಸಿರುವಿರಾ? | ☐ | ☐ |
| 28 | ಪರಿವೀಕ್ಷಕರ ಷರಾ (ಏನಾದರೂ ಇದ್ದಲ್ಲಿ): | | |

<u>ದೃಢೀಕರಣ:</u>

ಸಂಸ್ಥೆಯಲ್ಲಿನ ಎಲ್ಲಾ ಪ್ರೋಗ್ರಾಂಗಳ ಎಲ್ಲಾ ವಿದ್ಯಾರ್ಥಿಗಳ ವಿವರಗಳನ್ನು ಬಿಟಿಇಲಿಂಕ್ಸ್ ನಲ್ಲಿರುವ ಪರೀಕ್ಷಾ ಅಭ್ಯರ್ಥಿಗಳ ಪಟ್ಟಿಯೊಂದಿಗೆ ಪರಿಶೀಲಿಸಲಾಗಿದ್ದು, ಸದರಿ ವಿದ್ಯಾರ್ಥಿಗಳು ನಿಗದಿತ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಅರ್ಜಿ ಸಲ್ಲಿಸಿ, ನೋಂದಾಯಿಸಿರುತ್ತಾರೆ ಹಾಗೂ ಸದರಿ ಪ್ರೋಗ್ರಾಂಗಳ Lateral Entry/Change of Program/Repeater Admission/Malpractice Punishments ಸಹಿತ ವಿದ್ಯಾರ್ಥಿಗಳು ಅನ್ವಯವಾಗುವ/ನೋಂದಾಯಿಸಿರುವ Bridge Subjects /X Bridge Subjects – Subject Dictionary ಗಳನ್ನು ಪರಿಶೀಲಿಸಿ ವಿವರಗಳು ಸರಿಯಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಅರ್ಹ ವಿದ್ಯಾರ್ಥಿಗಳ ಮತ್ತು NE (<40%) ವಿಷಯಗಳ ಆಂತರಿಕ ಅಂಕಗಳ ಸಹಿತ ಎಲ್ಲಾ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ವಿಭಾಗಾಧಿಕಾರಿಗಳು ಹಾಗೂ ಸಂಸ್ಥೆಯ ಪ್ರಾಂಶುಪಾಲರು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಆಪ್‌ಲೋಡ್ ಮಾಡಿರುವ ಮತ್ತು ಸದರಿ ವಿವರಗಳನ್ನು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಿಂದ ಡೌನ್ ಲೋಡ್ ಮಾಡಿ ಪರಿಶೀಲಿಸಲಾಗಿ, ಎಲ್ಲಾ ವಿವರಗಳು ಸರಿಯಾಗಿರುವುದು ಕಂಡುಬಂದಿದೆ ಎಂದು ದೃಢೀಕರಿಸಲಾಗಿದೆ.

ಪ್ರಾಂಶುಪಾಲರ ಸಹಿ

ಪರಿವೀಕ್ಷಕರ ಸಹಿ & ಪೂರ್ಣ ವಿಳಾಸ (ಸೀಲು)